




ಶಿಕ್ಷಣದ ಡಯಲೆಕ್ಟಿಕ್ ಹಾಳಾಗಬಹುದು. ಆದರೆ ಎಲ್ಲಕ್ಕಿಂತಾ ಮುಖ್ಯವಾಗಿ, ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದ ಆನ್‌ಲೈನ್ ಶಿಕ್ಷಣದಲ್ಲಿ ಕಲಿಯುವವರು ಮತ್ತು ಕಲಿಸುವವರ ನಡುವೆ ಇಂತಹ ಸಂವಾದದ ಸಾಧ್ಯತೆಯೇ ಮರೆಯಾಗಿಬಿಡಬಹುದು. ಇದನ್ನು ತಡೆಯುವುದು ಹೇಗೆ ಎನ್ನುವುದೂ ಕೂಡಾ ನಮ್ಮ ಎದುರಿಗಿರುವ ಒಂದು ದೊಡ್ಡ ಸವಾಲು.

ಶಿಕ್ಷಣಕ್ಕೆ ಹಲವು ಭೌತಿಕ ಸಂಪನ್ಮೂಲಗಳ ಅಗತ್ಯವಂತೂ ಇದ್ದೇ ಇದೆ. ಆದರೆ, ಅದೆಲ್ಲದರ ಹೊರತಾಗಿ, ಈ ನಾಲ್ಕು ವಿಚಾರಗಳು ಇಂದಿನ ಆನ್‌ಲೈನ್ ಶಿಕ್ಷಣದ ಸಂದರ್ಭದಲ್ಲಿ ಅತೀ ಮುಖ್ಯವೆಂದು ನನ್ನ ಅನಿಸಿಕೆ: ಶಿಕ್ಷಣದ ಆವರಣ, ಶಿಕ್ಷಣದ ಸಾರ್ವತ್ರಿಕತೆ, ಶಿಕ್ಷಣದ ಮಾನಸಿಕತೆ, ಶಿಕ್ಷಣದ ಕ್ರಮ. ಆನ್‌ಲೈನ್ ಶಿಕ್ಷಣದ ಹೊರತಾಗಿಯೂ ಮುಖಾಮುಖಿ ಶಿಕ್ಷಣದಲ್ಲೂ ಈ ಅಂಶಗಳು ಮುಖ್ಯವಾದವು. ಆದರೆ, ಮುಖಾಮುಖಿ ಶಿಕ್ಷಣದಲ್ಲಿ ನಾವು ಈ ಸಮಸ್ಯೆಗಳನ್ನು ಪರಿಹರಿಸಿಬಿಟ್ಟಿದ್ದೇವೆ ಎಂದಲ್ಲ.